Vijaya Karnataka.
27th Dec 2014.
Saturday.

ವಿಜಯ ಕರ್ನಾಟಕ

ಜಯಾ ಪ್ರಕರಣ: ಹೊಸ ಎಸ್‌ಪಿಪಿ

ಸಂಚಾರ ದಟ್ಟಣೆ ತಪ್ಪಿಸಲು ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡಗಳಲ್ಲಿ ಮೆಟ್ರೊ ಅಥವಾ ಮೋನೊ ರೈಲು ಆರಂಭಕ್ಕೆ ಚಿಂತಿಸಲು ಸಿಎಂ ಸೂಚನೆ: ಸಚಿವ ಬೇಗ್

ICER 2014@RVCE

# ಪರಿಸರ ಸಂರಕ್ಷಣೆಯ ಕಾನೂನುಗಳ ದುರ್ಬಲಗೊಳಿಸಲು ಕೇಂದ್ರ ಯತ್ನ

**ವಿಕ ಸುದ್ದಿಲೋಕ** ಬೆಂಗಳೂರು



ಕೇಂದ್ರ ಸರಕಾರವು ಅಭಿವೃದ್ಧಿ ಹೆಸರಿನಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಕಾನೂನು ದುರ್ಬಲ ಗೊಳಿಸಲು ಯತ್ನಿಸುತ್ತಿದೆ. ಇದರಿಂದ ಪರಿಸರಕ್ಕೆ ಭಾರಿ ಪೆಟ್ಟು ಬೀಳಲಿದೆ ಎಂದು ಸುಪ್ರೀಂಕೋರ್ಟ್ ವಕೀಲ ಪ್ರಶಾಂತ್ ಭೂಷಣ್ ಆತಂಕ ವ್ಯಕ್ತಪಡಿಸಿದರು.

ಭೋಪಾಲ್‌ನ ಪರಿಸರ ಸಂಶೋಧನೆ ಮತ್ತು ಅಭಿವೃದ್ಧಿ ನಿಯತಕಾಲಿಕೆ ಮತ್ತು ಆರ್.ವಿ. ಎಂಜಿನಿಯರಿಂಗ್ ಕಾಲೇಜು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಪರಿಸರ ಸಂಶೋಧನೆ ಕುರಿತ 7ನೇ ಅಂತಾರಾಷ್ಟ್ರೀಯ ಸಮ್ಮೇಳನ'- 2014 (ಐಸಿಇಆರ್) ದಲ್ಲಿ ಅವರು ಮಾತನಾಡಿದರು.

''ಪರಿಸರ ರಕ್ಷಣೆಯ ಕಾನೂನುಗಳು ಪರಿಣಾಮ ಕಾರಿಯಾಗಿ ಜಾರಿಯಾಗಿಲ್ಲ, ಸರಕಾರಗಳು ಗಣಿಗಾರಿಕೆಗೆ ಒತ್ತು ನೀಡುತ್ತಿರುವುದರಿಂದಾಗಿ ನೀರು, ಗಾಳಿ ಕಲುಷಿತಗೊಳ್ಳುತ್ತಿದೆ. ಅರಣ್ಯ ನಾಶವಾಗುತ್ತಿದ್ದು, ಸ್ಥಳೀಯ ಜನರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಕಲ್ಲಿದ್ದಲು ಗಣಿಗಾರಿಕೆಗೆ ಅನುಮತಿ ನೀಡಬಾರದೆಂದು ಸುಪ್ರೀಂಕೋರ್ಟ್ ಸ್ಪಷ್ಟ ಸೂಚನೆ ನೀಡಿದರೂ ಸರಕಾರ ಗಣಿಗಾರಿಕೆಗೆ ಪರವಾನಗಿ ನೀಡುತಿದೆ.'' ಎಂದು ತಿಳಿಸಿದರು.

## ಸಾರ್ವಜನಿಕ ಚರ್ಚೆಯಾಗಲಿ

''ತಾಪಮಾನ ಬದಲಾವಣೆಯು ನಿಸರ್ಗದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಆದ ಕಾರಣ ಪರಿಸರ ರಕ್ಷಣೆಗೆ ಜಾಗತಿಕ ಮಟ್ಟದ ನಿರ್ಧಾರ ಅಗತ್ಯವಿದೆ,'' ಎಂದು ಪರಿಸರ ತಜ್ಞ ಡಾ. ಆರ್.ಕೆ.ಪಚೌರಿ ಪ್ರತಿಪಾದಿಸಿದರು.

''ಸರಕಾರಗಳು ಹವಾಮಾನ ವೈಪರೀತ್ಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನೀತಿಗಳನ್ನು ರೂಪಿಸುತ್ತಿಲ್ಲ, ಬದಲಿಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ನೀತಿಗಳನ್ನೇ ಅನುಸರಿಸುತ್ತಿವೆ. ಇದು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಸರಿ ಹೊಂದುವುದಿಲ್ಲ,'' ಎಂದರು. ''ದೇಶದ ಆರ್ಥಿಕ ನೀತಿ ರೂಪಿಸುವಿಕೆಗೆ ಐಐಟಿ ಮತ್ತು ಐಐಎಂಗಳು ಎಷ್ಟರ ಮಟ್ಟಿಗೆ ಕೊಡುಗೆ ನೀಡುತ್ತಿವೆ ಎಂಬುದರ ಬಗ್ಗೆ ಚಿಂತಿಸಬೇಕಿದೆ. ಅಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಆತ್ಮ ಅಮೆರಿಕದಲ್ಲಿರುತ್ತದೆ. ದೇಹವು ಸಹ 4 ವರ್ಷದ ಬಳಿಕ ಅಲ್ಲಿಗೆ ಹೋಗುತ್ತದೆ. ಇವರಿಂದ ದೇಶಕ್ಕೆ ಯಾವುದೇ ಕೊಡುಗೆ ಸಿಗುತ್ತಿಲ್ಲ,'' ಎಂದರು.

''ಕಸ್ತೂರಿ ರಂಗನ್ ಮತ್ತು ಗಾಡ್ಗೀಳ್ ವರದಿಗಳ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಗಲಿ. ಇದು ಪಾರದರ್ಶಕತೆಯಿಂದ ಕೂಡಿರಬೇಕು. ಒಳಿತು, ಕೆಡಕಿನ ಕುರಿತು ಜನರೇ ನಿರ್ಧರಿಸಲಿ,'' ಎಂದರು.

ದುರಂತದ ಸಂಗತಿ. ಯೋಜನೆಗಳಿಗೆ ನಿರಾಕ್ಷೇಪಣಾ ಪತ್ರ ನೀಡಲು ಸ್ವತಂತ್ರ ನಿಯಂತ್ರಣ ಪ್ರಾಧಿಕಾರ ರಚಿಸುವಂತೆ ನ್ಯಾಯಾಲಯವು ಸರಕಾರಕ್ಕೆ ನಿರ್ದೇಶನ ನೀಡಿದೆ. ಆದರೆ, ಈವರೆಗೆ ಆ ಕೆಲಸ ಮಾಡಿಲ್ಲ,'' ಎಂದು ಹೇಳಿದರು.

''ಆಧುನಿಕ ತಂತ್ರಜ್ಞಾನದಿಂದಾಗಿ ಹೊಸ ಆತಂಕಗಳು ಶುರುವಾಗಿವೆ. ರೇಡಿಯೊ ತರಂಗಗಳು ಮತ್ತು ಮೊಬೈಲ್ ಟವರ್‌ಗಳಿಂದ ಜೀವವೈವಿಧ್ಯತೆಗೆ ಕುತ್ತು ಬಂದಿದೆ. ಪವನ ಮತ್ತು ಸೌರ ವಿದ್ಯುತ್ ಉತ್ಪಾದನೆಯ ವೆಚ್ಚಕ್ಕಿಂತ ಅಣು ವಿದ್ಯುತ್ ಉತ್ಪಾದನಾ ವೆಚ್ಚ ಜಾಸ್ತಿ. ಹಾಗಾಗಿಯೇ ಜರ್ಮನಿ, ಇಟಲಿ, ಜಪಾನ್ ರಾಷ್ಟ್ರಗಳು ಅಣು ವಿದ್ಯುತ್ ಹಾನಿಕಾರಕವಲ್ಲ ಎಂದು ಹೇಳುತ್ತಾರೆ. ಸ್ವತಂತ್ರ ಸಂಶೋಧಕರು ವಾಸ್ತವತೆಯನ್ನು ಜನರ ಮುಂದಿಡುತ್ತಾರೆ. ಆದರೆ, ಕಂಪನಿಗಳಿಗೆ ಪರಿಸರದ ಬಗ್ಗೆ ಕಾಳಜಿ ಇಲ್ಲ,'' ಎಂದರು.

'ಕಸ್ತೂರಿ ರಂಗನ್ ಮತ್ತು ಗಾಡ್ಗೀಳ್ ವರದಿ ವಿಚಾರದಲ್ಲಿ ರಾಜಕೀಯ ಹಸ್ತಕ್ಷೇಪ ಸಲ್ಲದು. ಪರಿಸರ ಸಂರಕ್ಷಣೆ ದೃಷ್ಟಿಯಿಂದ ಆಲೋಚಿಸಬೇಕು. ಜನರ ಮೇಲೆ ಒತ್ತಡ ಹೇರಿ ಮತಾಂತರಗೊಳಿಸುವುದು ಸರಿಯಲ್ಲ, ಅದನ್ನು ಸಮರ್ಥಿಸುವ ಕಾಯಿದೆಯನ್ನು ವಿರೋಧಿಸಬೇಕಿದೆ,'' ಎಂದು ಸುದ್ದಿಗಾರರಿಗೆ ತಿಳಿಸಿದರು.

